## ವಿಚಾರ ಸಂಕಿರಣದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಕಂಬಾರ ಅಭಿಮತ

# ಹೋರಾಟದ ಕಿಚ್ಚು ಹಚ್ಚಿದ್ದ ರಂಗಭೂಮಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅನಕ್ಷರಸ್ಥರಲ್ಲೂ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹಚ್ಚಿದ್ದೇ ರಂಗಭೂಮಿ ಹಾಗೂ ಗ್ರಾಮೀಣ ಬಯಲಾಟಗಳು ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಸ್ಮರಿಸಿದರು.

ಜೈನ್ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯ ಅಕಾಡೆಮಿ ಶುಕ್ರವಾರ ಹಮ್ಮಿಕೊಂಡಿದ್ದ 'ಸ್ವಾತಂತ್ರ್ಯ ಆಂದೋಲನಕ್ಕೆ ಕನ್ನಡ ಸಾಹಿತ್ಯದ ಕೊಡುಗೆ' ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಅಂದು ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ್ದ ಸಾಹಸಿಗರ ಕಥೆಗಳು ನಾಟಕಗಳ ರೂಪ ಪಡೆಯುತ್ತಿದ್ದವು. ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮತ್ತಿತರರ ಕಥೆಗಳನ್ನು ರಂಗದ ಮೇಲೆ ತರುತ್ತಿದ್ದರು. ಸಂಗ್ಯಾ ಬಾಳ್ಯಾ ದಂತಹ ಕಥೆಯಲ್ಲೂ ಬ್ರಿಟಿಷ್ ವಿರೋಧಿ ಮಾತುಗಳನ್ನು ತುರುಕುತ್ತಿದ್ದರು. ಖಳನಾಯಕನ ಪಾತ್ರಗಳಿಗೆ ಬ್ರಿಟಿಷ್ ಸಂಗೀತ, ಸ್ವಾತಂತ್ರ್ಯ ಹೋರಾಟದ ಕಲಿಗಳ ಪಾತ್ರಗಳಿಗೆ ಭಾರತೀಯ ಸಂಗೀತ ನುಡಿಸುತ್ತಿದ್ದರು. ಕಂಪನಿ ನಾಟಕಗಳೂ ಅದೇ ದಾರಿಯಲ್ಲಿ ಸಾಗಿದವು. ಇದರಿಂದ ಬ್ರಿಷರ ವಿರುದ್ಧದ ಹೋರಾಟ ತೀವ್ರ ಸ್ವರೂಪ ಪಡೆಯಿತು ಎಂದರು.



ಸಾಹಿತ್ಯ ಅಕಾಡೆಮಿ ಆಯೋಜಿಸಿದ್ದ 'ಸ್ವಾತಂತ್ರ್ಯ ಆಂದೋಲನಕ್ಕೆ ಕನ್ನಡ ಸಾಹಿತ್ಯದ ಕೊಡುಗೆ' ವಿಚಾರ ಸಂಕಿರಣದಲ್ಲಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಸಮಿತಿ ಸದಸ್ಯ ಎಚ್.ಎಸ್. ಶಿವಪ್ರಕಾಶ್ ಮಾತುಕತೆಯಲ್ಲಿ ತೊಡಗಿದ್ದರು —ಪ್ರಜಾವಾಣಿ ಚಿತ್ರ

ಗಳಗನಾಥರು, ಬಸವರಾಜ ಕಟ್ಟಿಮನಿ, ತರಾಸು, ಅನಕೃ, ಕೃಷ್ಣಮೂರ್ತಿ ಪುರಾಣಿಕ ಸೇರಿದಂತೆ ಅಂದಿನ ಕಾಲಘಟ್ಟದ ಸಾಹಿತಿಗಳು ಕಥೆ, ಕಾದಂಬರಿಗಳ ಮೂಲಕ ಸ್ವಾತಂತ್ರ್ಯ ಹೋರಾಟ ಕುರಿತು ಜಾಗೃತಿ ಮೂಡಿಸಿದ್ದರು. ಪತ್ರಿಕೆಗಳು, ಸಾಹಿತ್ಯ ಕೃತಿಗಳೇ ಊರಿನ ಆಚೆಯ ತಿಳಿವಳಿಕೆಗೆ ಸಹಕಾರಿಯಾಗಿದ್ದವು ಎಂದರು.

ಚಳವಳಿ ನಿರತರಿಗೆ ಊಟ ನೀಡುತ್ತಿದ್ದ ದಲಿತ ಮಹಿಳೆಯೊಬ್ಬರು ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ ಪಡೆಯಲು ನಿರಾಕರಿಸಿದ್ದು ಅವರಲ್ಲಿನ ಸ್ವಾಭಿಮಾನದ ಪ್ರತೀಕ ಎಂದರು.

> **ದಲಿತರಿಗೂ ಶಿಕ್ಷಣ ನೀಡಲು ಬ್ರಿಟಿಷರು ನಿರ್ಧರಿಸಿದ್ದು ಕ್ರಾಂತಿಕಾರಕ ನಡೆ. ಮೆಕಾಲೆ ಶಿಕ್ಷಣ ನೀತಿ ಶಿಕ್ಷಣ ಸಮಾನತೆಗೆ ನಾಂದಿಯಾಯಿತು**
>
> **ಚಂದ್ರಶೇಖರ ಕಂಬಾರ**, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ

ಸಾಹಿತಿ ಎಚ್.ಎಸ್. ಶಿವಪ್ರಕಾಶ್, ಸ್ವಾತಂತ್ರ್ಯ ಚಳವಳಿ ಕೇವಲ ಬ್ರಿಟಿಷರಿಂದ ಮುಕ್ತಿ ಪಡೆಯಲಷ್ಟೇ ಸೀಮಿತವಾಗಿರಲಿಲ್ಲ. ಸಮಾಜದ ಜಾತಿ ವ್ಯವಸ್ಥೆ, ಅಸಮಾನತೆ, ಮೌಢ್ಯಗಳ ವಿರುದ್ಧದ ಹೋರಾಟವೂ ಆಗಿತ್ತು. ಆಶಯ ಸಾಕಾರಗೊಂಡ ನಂತರ ಸಂಭ್ರಮಕ್ಕೆ ಕಾರಣಗಳಿದ್ದರೂ, ದೇಶ ವಿಭಜನೆ, ಗಾಂಧಿ ಹತ್ಯೆ ಸೇರಿದಂತೆ ಹಿಂಸಾಚಾರದ ಸ್ವರೂಪಗಳು ದುರಂತದ ಕ್ಷಣಗಳಿಗೂ ಸಾಕ್ಷಿಯಾದವು. ಸ್ವಾತಂತ್ರ್ಯದ ಅಮೃತ ಗಳಿಗೆಯಲ್ಲಿ ಎಷ್ಟು ಅಮೃತ ಸಿಕ್ಕಿದೆ, ನೋವೆಷ್ಟು ಎನ್ನುವ ಕುರಿತು ವಿಮರ್ಶೆ ಮಾಡಿಕೊಳ್ಳಬೇಕಿದೆ ಎಂದರು.

ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿ ಕೆ.ಶ್ರೀನಿವಾಸ ರಾವ್, ಜೈನ್ ವಿಶ್ವವಿದ್ಯಾಲಯದ ಡೀನ್ ರಜನಿ ಜೈರಾಮ್ ಉಪಸ್ಥಿತರಿದ್ದರು.